ಕ್ರಾಂತಿಯಕಿದಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ
ಭಾನುವಾರ
18 ಜುಲೈ 2021

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ಸಿ.ತಮ್ಮಣ್ಣ ಚಾಲನೆ

ಮದ್ದೂರು : ಗ್ರಾಮಾಂತರ ಪ್ರದೇಶದಲ್ಲಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರದಿಂದ ಕೋಟ್ಯಾಂತರ ರೂ. ಅನುದಾನ ತರಲಾಗಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ತಾಲೂಕಿನ ಚಿನ್ನಸಂದ್ರ ಗ್ರಾಮದಲ್ಲಿ ಶನಿವಾರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಸ್ತೆಗಳು ಅಭಿವೃದ್ಧಿಯ ಸಂಕೇತವಾಗಿದ್ದು, ರಸ್ತೆಗಳು ಉತ್ತಮವಾಗಿದ್ದರೆ ಆ ಭಾಗದ ಜನ ಜೀವನವು ಉತ್ತಮವಾಗಿರುತ್ತದೆ. ಈ ಹಿನ್ನಲೆಯಲ್ಲಿ ತಾಲೂಕಿನಲ್ಲಿ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಮುಖಂಡರಾದ ಬಿ.ರಾಜು, ಪ್ರಸನ್ನ, ಕಾಳೇರ, ಮಾದೇವಯ್ಯ, ನಿಂಗೇಗೌಡ, ಯೋಗೇಶ್, ಪುಟ್ಟರಾಮು, ಮಹದೇವಯ್ಯ, ಸುರೇಶ್, ಪಿಡಿಓ ಮಧುಸೂಧನ್ ಸೇರಿದಂತೆ ಇತರರಿದ್ದರು.

ಕೃಷಿ ಅಭಿಯಾನ ಕಾರ್ಯ ಕ್ರಮ ರೈತರಿಗೆ ವರದಾನ

ಕೃಷಿ ನಿರತ ರಥಕ್ಕೆ ಶಾಸಕ ಡಿ.ಸಿ.ತಮ್ಮಣ್ಣ ಚಾಲನೆ

ಮದ್ದೂರು : ರೈತರು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಸಮರ್ಪಕವಾಗಿ ಬಳಕೆಮಾಡಿಕೊಳ್ಳಬೇಕು ಮತ್ತು ಅಧಿಕಾರಿಗಳಿಂದ ಸೂಕ್ತ ಮಾಹಿತಿಯೊಂದಿಗೆ ಬೆಳೆಗಳನ್ನು ಬೆಳೆದರೆ ಹೆಚ್ಚಿನ ಫಸಲು ತೆಗೆದು ಆರ್ಥಿಕವಾಗಿ ಸದೃಢರಾಗಬಹುದು. ಕೃಷಿ ಅಭಿಯಾನ ಕಾರ್ಯ ಕ್ರಮ ರೈತರಿಗೆ ವರದಾನ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ಪಟ್ಟಣದ ಶ್ರೀಉಗ್ರನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ 2020–21 ನೇ ಸಾಲಿನ ಕೃಷಿಅಭಿಯಾನ ಕಾರ್ಯಕ್ರಮದಡಿ ವಿವಿಧ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ರೈತರಿಗೆ ದೊರೆಯುವ ಸವಲತ್ತು ಹಾಗೂ ತಾಂತ್ರಿಕ ಮಾಹಿತಿಗಳನ್ನೊಳಗೊಂಡ ಕೃಷಿ ನಿರತ ರಥಕ್ಕೆ ಚಾಲನೆ ನೀಡಿ ಮಾತನಾಡಿದರು.

ಕೃಷಿಯನ್ನು ಹೆಚ್ಚು ಲಾಭದಾಯಕವಾಗಿ ಮಾಡಲು ಹಾಗೂ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆ ಒದಗಿಸಲು ಲಭ್ಯವಿರುವ ಸಾಗುವಳಿ ಜಮೀನಿನಲ್ಲಿ ಗರಿಷ್ಠ ಕೃಷಿ ಉತ್ಪಾದನೆ ಪಡೆಯುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಕೃಷಿ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳನ್ನೊಳಗೊಂಡಂತೆ ರೈತರಿಗೆ ನೂತನ ತಂತ್ರಜ್ಞಾನವನ್ನು ಏಕಗವಾಕ್ಷಿ ವಿಸ್ತರಣಾ ಪದ್ಧತಿಯನ್ನು ರೈತರಿಗೆ ತಲುಪಿಸಲು ಕೃಷಿ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ವಿವಿಧ ಮಾಹಿತಿ ಒಳಗೊಂಡ ರಥಯಾತ್ರೆಯು ತಾಲೂಕಿನ ವಿವಿಧ ಗ್ರಾಮಗಳಿಗೆ ಆಗಮಿಸಿದ್ದು, ರೈತರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು.

ಇದೇ ವೇಳೆ ಪವರ್ ವೀಡರ್, ಛಾಫ್ ಕಟರ್, ಮನಿಕಿಟ್‌ಗಳನ್ನು ಅರ್ಹ ರೈತರಿಗೆ ವಿತರಣೆ ಮಾಡಲಾಯಿತು ಹಾಗೂ ಬೆಳೆ ವಿಮೆ ಮಾಹಿತಿ, ಕಿರು ಹೊತ್ತಿಗೆ ಬಿಡುಗಡೆ, ಬೆಳೆ ಸಮೀಕ್ಷೆ ಹೋಸ್ಟರ್ ಬಿಡುಗಡೆ ಮಾಡಲಾಯಿತು.

ಉಪ ಕೃಷಿ ನಿರ್ದೇಶಕಿ ಕೆ.ಮಾಲತಿ, ತಹಸೀಲ್ದಾರ್ ವಿಜಯ್ ಕುಮಾರ್, ಕೃಷಿ ಸಮಾಜದ ಅಧ್ಯಕ್ಷ ಶಿವರಾಮು, ಜಿಲ್ಲಾ ಪ್ರತಿನಿಧಿ ಪುಟ್ಟಸ್ವಾಮಿ, ಸದಸ್ಯ ನಾಗರಾಜು, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ರೇಖಾ, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್, ಅಧಿಕಾರಿಗಳಾದ ಹನುಮೇಗೌಡ, ಮಹೇಶ್, ಪ್ರದೀಪ್, ಮಂಜು, ರೂಪಶ್ರೀ, ಕೃಷ್ಣೇಗೌಡ, ಭಾವನಿ, ರಾಜೇಶ್, ವೆಂಕಟೇಶ್, ದಕ್ಷಿಣಾಮೂರ್ತಿ, ರಾಮೇಗೌಡ, ಮಾಯೀಗೌಡ ಸೇರಿದಂತೆ ಇತರರಿದ್ದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಕಿವಿಮಾತು

ಮೈಸೂರು: ಮಕ್ಕಳು ಕೋವಿಡ್ ನಿಯಮಗಳನ್ನು ಪಾಲನೆ ಮಾಡಿ ಎರಡು ದಿನಗಳ ಕಾಲ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಬೇಕು ಎಂದು ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹೇಳಿದ್ದಾರೆ.

ಜೀವದಾರಾ ಪದವೀಧರರ ಘಟಕದ ವತಿಯಿಂದ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಲಕ್ಷ್ಮಿಪುರಂನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಆವರಣದಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಮಾಸ್ಕ್ ಸ್ಯಾನಿಟೈಸರ್ ಗುಲಾಬಿ ಹೆಸ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರ ಪರೀಕ್ಷೆಯನ್ನು ಎರಡು ದಿನಕ್ಕೆ ಸೀಮಿತ ಮಾಡಿ ಮಕ್ಕಳಿಗೆ ಯಾವ ಗೊಂದಲ ಇಲ್ಲದಂತೆ ಪರೀಕ್ಷೆ ವಾಡಲು ಸಿದ್ಧತೆ ವಾಡಿಕೊಂಡಿದ್ದಾರೆ.

ಕೋವಿಡ್‌ನಿಂದ ಈ ಬಾರಿ ಶಾಲೆಗಳೇ ನಡೆದಿಲ್ಲ. ಆನ್ ಲೈನ್ ಮೂಲಕವೇ ಅತಿಹೆಚ್ಚು ತರಗತಿಗಳನ್ನು ನಡೆದಿದ್ದು ಪರೀಕ್ಷೆ ಬರೆಯುವ ಎಲ್ಲ ಮಕ್ಕಳನ್ನು ಉತ್ತೀರ್ಣ ಮಾಡುವುದಾಗಿ ಸರ್ಕಾರ ತಿಳಿಸುವುದರಿಂದ ಯಾವ ವಿದ್ಯಾರ್ಥಿ ಕೂಡ ಧೈರ್ಯಗೆಡದೆ ಪರೀಕ್ಷೆ ಬರೆಯ ಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ ಆರ್ ಸತ್ಯನಾರಾಯಣ್, ಖಜಾಂಚಿ ಜಯಸಿಂಹ, ಸಹ ಕಾರ್ಯದರ್ಶಿ ರಂಗನಾಥ್, ಕೇಬಲ್ ಮಹೇಶ್, ವಿನಯ್ ಕಣಗಾಲ್ ಹಾಗೂ ಶಿಕ್ಷಕರು ಹಾಜರಿದ್ದರು

ಜಯಕರ್ನಾಟಕದಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮಾಸ್ಕ್, ಸ್ಯಾನಿಟೈಜರ್ ವಿತರಣೆ

ಹಲಗೂರು : ಜಯಕರ್ನಾಟಕ ಸಂಘಟನೆ ವತಿಯಿಂದ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಮಾಸ್ಕ್ ಹಾಗೂ ಸ್ಯಾನಿಟೈಜರ್ ವಿತರಿಸಲಾಯಿತು.

ಹಲಗೂರು ಹೋಬಳಿ ಮಾರಗೌಡನಹಳ್ಳಿ ಪ್ರೌಢಶಾಲೆಗೆ ಜಯ ಕರ್ನಾಟಕ ಸಂಘಟನೆ ವತಿಯಿಂದ ಮಾಸ್ಕ್ ಹಾಗೂ ಸ್ಯಾನಿಟೈಜರ್ ವಿತರಿಸಿ ಮಾತನಾಡಿದ ಮಳವಳ್ಳಿ ತಾಲ್ಲೂಕು ಅಧ್ಯಕ್ಷ ರಮೇಶ್ ಮಾತ ನಾಡಿ, ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವುದರಿಂದ ನಮ್ಮ ಸಂಘಟನೆ ವತಿಯಿಂದ ಮಾಸ್ಕ್ ಹಾಗೂ ಸ್ಯಾನಿಟೈಜರ್ ವಿತರಿಸಿದ್ದೇವೆ. ಅಲ್ಲದೆ ಹಲಗೂರು ಹೋಬಳಿಯ ಎಲ್ಲ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿಗೂ ನೀಡುತ್ತೇವೆ ಎಂದರು.

ಮಾರಗೌಡನಹಳ್ಳಿ ಪ್ರೌಢಶಾಲೆಯ ಒಳ್ಳೆಯ ಹೆಸರು ಪಡೆದಿದ್ದು, ವಿದ್ಯಾರ್ಥಿಗಳು ಬರೀ ಮಂಡ್ಯ ಜಿಲ್ಲೆಯಲ್ಲಿ ಅಲ್ಲದೆ ಕರ್ನಾಟಕಕ್ಕೆ ನಂ ಬರ್ ಒನ್ ಈ ಶಾಲೆ ಆಗಬೇಕು. ಬರುವ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಒಳ್ಳೆಯ ಹೆಸರನ್ನು ಪಡೆಯಲಿ ಎಂದು ಆಶಿಸುತ್ತೇನೆ ಎಂದರು. ನಂತರ ಮಕ್ಕಳಿಗೆ ಮಾಸ್ಕ್ ಸ್ಯಾನಿಟೈಜರ್ ವಿತರಿಸಿದರು.

ಇದೇ ಸಂದರ್ಭದಲ್ಲಿ ಮುಖ್ಯಶಿಕ್ಷಕರಾದ ಕಾಳರಾಜೇಗೌಡ, ಪ್ರಕಾಶ್, ರಾಜು, ಹರ್ಷಿತಾ, ಅಭಿ, ಶಿವ, ಹರ್ಷ, ಶಿವಕುಮಾರ್ ಶಾಲಾ ಸಿಬ್ಬಂದಿ ಹಾಜರಿದ್ದರು



ಕಾವ್ಯಗಳು ಬದಲಾವಣೆಯ ದಿಕ್ಸೂಚಿ : ಸಂಧ್ಯಾ

ಅಂತರ್ಜಾಲ ಚುಟುಕು ವಾಚನ ಸ್ಪರ್ಧೆ

ಮೈಸೂರು : ಕರ್ನಾಟಕ ರಾಜ್ಯ ಬರಹಗಾರರ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಡೆದ ಅಂತರ್ಜಾಲ ಕವಿಗೋಷ್ಠಿಯನ್ನು ದ್ವೇತಿಕಿ ಮಾತನಾಡಿದ ಅಧ್ಯಕ್ಷೆ ಸಂಧ್ಯಾ ರಾವ್ ಕಾವ್ಯಗಳು ಸಮಾಜದ ಬದಲಾವಣೆಯ ದಿಕ್ಸೂಚಿ ಯಾಗಬೇಕೆಂದು ಆಶಿಸಿದರು.

ತಮಗಿಷ್ಟವಾದ ವಿಷಯ ಪ್ರಕಾರ. ಮೂರು ಚುಟುಕು ವಾಚನ ಸ್ಪರ್ಧೆಯಲ್ಲಿ ಹಲವು ಕವಿಗಳು ಸ್ವರಚಿತ ಕಾವ್ಯ ವಾಚನ ಮಾಡಿದರು. ಕುಯಿತ್ರಿ ದೀಪ್ತಿರ ನಿರೂಪಣೆಯೊಂದಿಗೆ ಆರಂಭಗೊಂಡ ಗೋಷ್ಠಿಯ ಮೇಲ್ವಿಚಾರಣೆಯನ್ನು ಅಧ್ಯಕ್ಷೆ ಸಂಧ್ಯಾ ರಾವ್ ಜಿಲ್ಲಾ ಸಂಚಾಲಕ ಎಂ.ಸುಹಾಸ್ ನಡೆಸಿಕೊಟ್ಟರು.

ಕರ್ನಾಟಕ ರಾಜ್ಯ ಬರಹಗಾರರ ಸಂಘ ಹೂವಿನ ಹಡಗಲಿಯ ಹೆಚ್.ಎಂ.ಕೊಟ್ರಯ್ಯ ಮಾತ ನಾಡಿ, ರಂಗಗೀತೆ ಜನಪದ ಸಾಹಿತ್ಯಕ್ಕೆ ಹೆಚ್ಚಿನ ಆಸ್ತಿ ತೋರಿಸಿ ಕುವೆಗಳನ್ನು ರಚಿಸಿರಿ ಎಂದು ಆಶಿಸಿದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ರಾಧಾ ಅನಿಲ್ ಕುಮಾರ್ ಬರಹಗಾರರಿಗೆ ಹೆಚ್ಚು ಹೆಚ್ಚು ಕವಿತೆಗಳನ್ನು ಬರೆದು ನಮ್ಮ ಮೈಸೂರಿನ ಸಂಸ್ಕೃತಿಯನ್ನು ಉಳಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸರಸ್ವತಿ ರಾಮಚಂದ್ರ ಬರಹಗಾರರ ಎಲ್ಲಾ ಚುಟುಕುಗಳನ್ನು ತಾಳ್ಮೆಯಿಂದ ಆಲಿಸಿ ಪ್ರತಿಯೊಬ್ಬರಿಗೂ ಸಲಹೆಗಳನ್ನು ಹೇಳಿ ಎಲ್ಲರನ್ನೂ ಪ್ರಶಂಸಿಸಿದರು. ಪ್ರಿಯಾಂಕ ನಾಯ್ಕ್, ಸಿ. ಎನ್. ಭಾಗ್ಯಲಕ್ಷ್ಮಿ ನಾರಾಯಣ್ ಪ್ರಾರ್ಥಿಸಿದರು. ಸಿ.ಪಿ. ರಾಧಾ ವಂದಿಸಿದರು.

ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಸಲಕರಣೆ, ಛಾಯಾಗ್ರಾಹಕರಿಗೆ ಆಹಾರ ಕಿಟ್ ವಿತರಣೆ

ಮದ್ದೂರು : ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಸಾಕಷ್ಟು ದಾನಿಗಳು ತಾಲೂಕಿನ ಸಾರ್ವಜನಿಕರಿಗೆ ಸಹಾಯ ಹಸ್ತ ಚಾಚಿರುವುದು ಪ್ರಶಂನೀಯ ಸಂಗತಿ ಎಂದು ತಹಸೀಲ್ದಾರ್ ಎಚ್.ವಿ.ವಿಜಯ್‌ಕುಮಾರ್ ಪ್ರಶಂಸೆ ವ್ಯಕ್ತಪಡಿಸಿದರು.

ತಾಲೂಕಿನ ಬೆಸಗರಹಳ್ಳಿಯಲ್ಲಿ ಸಮಾಜ ಸೇವಕ ಉದಯ್ ಅವರು ಸ್ವಂತ ಹಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಸಲಕರಣೆ ಹಾಗೂ ಛಾಯಾಗ್ರಾಹಕರಿಗೆ ಆಹಾರ ಕಿಟ್ ನೀಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕರೊನಾ ಮೊದಲ ಮತ್ತು 2 ನೇ ಅಲೆಯಲ್ಲಿ ತಾಲೂಕಿನಲ್ಲಿ ಕೆ.ಎಂ.ಉದಯ್ ಸೇರಿದಂತೆ ಬಹಳಷ್ಟು ದಾನಿಗಳು ಸರ್ಕಾರದೊಂದಿಗೆ ಹಾಗೂ ತಾಲೂಕು ಆಡಳಿತದೊಂದಿಗೆ ಕೈಜೋಡಿಸುವ ಮೂಲಕ ಜನರಿಗೆ ಅನುಕೂಲ ಮಾಡುವ ಮೂಲಕ ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿರುವುದು ಮೆಚ್ಚುಗೆ ಸಂಗತಿಯಾಗಿದೆ ಎಂದು ತಿಳಿಸಿದರು.

ಉದ್ಯಮಿ ಕೆ.ಎಂ.ಉದಯ್ ಮಾತನಾಡಿ, ಕರೊನಾ ಸಂಕಷ್ಟದಲ್ಲಿರುವ ಜನರಿಗೆ ಸಹಾಯಕ ಮಾಡಬೇಕೆಂಬ ಉದ್ದೇಶದಿಂದ ಆರೋಗ್ಯಕಿಟ್, ಹೆಲ್ಮ್, ಅಂಬುಲೆನ್ಸ್, ವೈದ್ಯಕೀಯ ಸಲಕೆಣೆಗಳು ಸೇರಿದಂತೆ ಹಲವು ಸವಲತ್ತುಗಳನ್ನು ನೀಡುವ ಮೂಲಕ ಜನರಿಗೆ ಸಹಾಯ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಸಮಾಜ ಮುಖಿ ಕಾರ್ಯಕ್ರಮ ಹಮ್ಮಿಕೊಂಡು ಜನ ಸೇವೆ ಮಾಡಲಾಗುವುದು ಎಂದು ತಿಳಿಸಿದರು.

ಮಾಜಿ ಸೈನಿಕ ಶ್ರೀನಿವಾಸ್, ಮುಖಂಡರಾದ ಹರೀಶ್ ಯರಗನಹಳ್ಳಿ, ಬುಲೆಟ್ ಲಕ್ಷ್ಮಣ್, ರಾಮು, ಗಿರೀಶ್, ಮಧು, ರವಿ ಸೇರಿದಂತೆ ಇತರರು ಹಾಜರಿದ್ದರು.

ತಾಲೂಕಿನ ಬೆಸಗರಹಳ್ಳಿಯಲ್ಲಿ ಸಮಾಜ ಸೇವಕ ಕೆ.ಎಂ.ಉದಯ್ ಅವರು ಸ್ವಂತ ಹಣದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಸಲಕರಣೆ ಹಾಗೂ ಛಾಯಾಗ್ರಾಹಕರಿಗೆ ಆಹಾರ ಕಿಟ್‌ಗಳನ್ನು ವಿತರಿಸಿದರು. ವಿಜಯಕುಮಾರ್, ಸಿಪಾಯಿಶ್ರೀನಿವಾಸ್, ಗಿರೀಶ್, ಮಧು, ರವಿ ಇದ್ದರು.

ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಾದ 11 ಮೂರ್ತಿಗಳ ಪ್ರತಿಮೆ ಸ್ಥಾಪನೆಗೆ ಸರ್ಕಾರಕ್ಕೆ ಮನವಿ

ಸೌಧದಲ್ಲಿ ಗ್ರಂಥಾಲಯ, ನೀರಿನ ಕಾರಂಜಿ, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಇಡುವುದು ಸೇರಿ ಇನ್ನಿತರ ಮೂಲ ಸೌಕರ್ಯ ಕಲ್ಪಿಸಿ, ಇಲ್ಲದಿದ್ದರೆ ಪ್ರತಿಭಟನೆ ಎಚ್ಚರಿಕೆ

ಮದ್ದೂರು : ಶಿವಮರ ಸತ್ಯಾಗ್ರಹ ಸೌಧದಲ್ಲಿ ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಾದ 11 ಮೂರ್ತಿಗಳ ಪ್ರತಿಮೆ ಸ್ಥಾಪಿಸಲು ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕೆಂದು ಸಹಕಾರ ಧುರೀಣ ಹಾಗೂ ಹಿರಿಯ ಪತ್ರಕರ್ತ ಕೌಡ್ಲೆ ಚನ್ನಪ್ಪ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಮಂಡ್ಯ ಜಿಲ್ಲೆಯ, ಮದ್ದೂರು ತಾಲೂಕಿನ ಶಿವಮರದಲ್ಲಿ ದಿ.ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನಡೆದ ಶಿವಮರ ಸತ್ಯಾಗ್ರಹ ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಗಾಂಧೀಜಿ ಅವರು ಪ್ರಶಂಸೆಗೂ ಪಾತ್ರವಾಗಿತ್ತು ಎಂದು ಪ್ರತಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

ಈ ಸೌಧದಲ್ಲಿ ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಾದ 11 ಮೂರ್ತಿಗಳ ಪ್ರತಿಮೆಯನ್ನು ಸ್ಥಾಪಿಸಬೇಕು. ಹಾಗೂ ಸಮಗ್ರ ಅಭಿವೃದ್ಧಿಯನ್ನು ಮಾಡುವ ಮೂಲಕ ಪ್ರವಾಸಿ ತಾಣವನ್ನಾಗಿ ನಿರ್ಮಾಣ ಮಾಡುವ ಮೂಲಕ ಸೌಧದ ಮಹತ್ವವನ್ನು ಪ್ರತಿಯೊಬ್ಬರಿಗೂ ತಿಳಿಸುವಂತೆ ಮಾಡಲು ಅಗತ್ಯಕ್ರಮಕೊಳ್ಳಬೇಕು ಎಂದರು.

ಸೌಧದಲ್ಲಿ ಗ್ರಂಥಾಲಯ, ನೀರಿನ ಕಾರಂಜಿ, ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಇಡುವುದು. ಸೌಧದ ಇತಿಹಾಸ ತಿಳಿಸುವ ಪುಸ್ತಕ ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಕಲ್ಪಿಸಬೇಕು. ಇಲ್ಲದಿದ್ದರೆ ಸೌಧದ ಆವರಣದಲ್ಲಿ ಮುಂದಿನ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ಸರ್ಕಾರಕ್ಕೆ ಹಾಗೂ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದರು.

ಮಹಿಳೆಯರ ಅನುಕೂಲಕ್ಕಾಗಿ ಹೊಲಿಗೆತರಬೇತಿ ಕೇಂದ್ರಕ್ಕೆ ಚಾಲನೆ

ಹಲಗೂರು : ಉಚಿತ ಹೊಲಿಗೆ ತರಬೇತಿ ಕೇಂದ್ರದ ಉದ್ಘಾಟನೆ ಹಾಗೂ ಪ್ರಕ್ತ ವರ್ಷದ ನೂತನ ಪದಾಧಿಕಾರಿಗಳ ಪದವಿ ಸ್ವೀಕಾರ ಕಾರ್ಯಕ್ರಮ ಹಲಗೂರಿನ ಲಯನ್ಸ್ ಭವನದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಾಜಿ ರಾಜ್ಯಪಾಲರಾದ ದೇವೇಗೌಡ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಹಿಳೆಯ ಉಚಿತ ಹೊಲಿಗೆ ತರಬೇತಿ ಕೇಂದ್ರವನ್ನು ಟೇಪ್ ಕತ್ತರಿಸಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಹಲಗೂರಿನ ಲಯನ್ಸ್ ಕ್ಲಬ್ ಪ್ರಾರಂಭವಾಗಿ ಸುಮಾರು ನಲವತ್ತು ವರ್ಷಗಳಾಯಿತು. ಅಂದಿನಿಂದ ಇಂದಿನವರೆಗೂ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದೇವೆ. ಆದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ಲಯನ್ಸ್ ಭವನ ಇರೋದು ಹಲಗೂರಿನಲ್ಲಿ ಮಾತ್ರ, ಇಂದು ಮಹಿಳೆಯರ ಅನುಕೂಲಕ್ಕಾಗಿ ಹೊಲಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಿದ್ದೀರಿ .ಅಲ್ಲದೆ ನಿಮ್ಮ ಕಟ್ಟಡದ ಮೊದಲನೇ ಮಹಡಿ ಕಟ್ಟಲು ನಾನು ನಿಮಗೆ ಕೈಜೋಡಿಸುತ್ತೇನೆ. ನನ್ನ ಕೈಲಾದ ಸಹಾಯವನ್ನು ಮಾಡುತ್ತೇನೆ ನೂತನವಾಗಿ ಆಯ್ಕೆಯಾಗಿರುವ ಪದಾಧಿಕಾರಿಗಳು ಮುಂದಿನ ದಿನಗಳಲ್ಲಿ ಹೆಚ್ಚಿಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ತಿಳಿಸಿದರು.

ಲಯನ್ಸ್ ಅಧ್ಯಕ್ಷ ಡಾ.ಸಿದ್ದರಾಜುರವರು ನೂತನ ಅಧ್ಯಕ್ಷ ಲಯನ್ಸ್ ನಾಗೇಶ್ ರವರಿಗೆ ಅಧಿಕಾರ ಹಸ್ತಾಂತರಿಸಲಾಯಿತು. ಕಾರ್ಯದರ್ಶಿಯಾಗಿ ಸುರೇಶ್ ಖಜಾಂಚಿಯಾಗಿ ಶ್ರೀನಿವಾಸಾಚಾರಿ ಪದಗ್ರಹಣ ಮಾಡಿದರು.

ನೂತನ ಅಧ್ಯಕ್ಷ ಡಾ.ನಾಗೇಶ್ ಮಾತನಾಡಿ, ಹಳೆಯ ಅಧ್ಯಕ್ಷರಿಗೆ ಹೇಗೆ ಬೆಂಬಲ ನೀಡಿದ್ದೀರಿ ಹಾಗೆಯೇ ನಿಮ್ಮ ಬೆಂಬಲವೂ ನಮಗಿರಬೇಕು. ಲಯನ್ಸ್ ಕ್ಲಬ್ ನಲ್ಲಿ ಇನ್ನೂ ಮುಂದಿನ ದಿನಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಸುಬ್ರಹ್ಮಣ್ಯ, ಕೃಷ್ಣೇಗೌಡ, ರಾಜಶೇಖರ